

# ಸೋದರಿ ನಿವೇದಿತಾ

## (ನಾಟಕ)

ರಚನೆ
ಪಾಂಡುರಂಗ ಜೋಯಿಸ್ ಕೆ.ಎನ್.
ಸರಗೂರು ರಮೇಶ್

### ಭಾಗ ೨

### ದೃಶ್ಯ -೬

**(ಶ್ರೀಮಾತೆ - ಮಂಚದ ಮೇಲೆ, ಮಾರ್ಗರೆಟ್ ಕೆಳಗೆ. ಜನರಿಗೆ ಆಶ್ಚರ್ಯ)**

**ಶ್ರೀಮಾತೆ :** ಬಾ... ಮಗು... ಇಲ್ಲಿ ಕುಳಿತುಕೋ.

**ಮಾರ್ಗರೆಟ್:** (ನಿಧಾನವಾಗಿ ಬಳಿಸಾರಿ... ಕುಳಿತುಕೊಳ್ಳುವಳು.)

**ಶ್ರೀಮಾತೆ :** ನಿನ್ನ ಹೆಸರೇನು ಮಗು?

**ಮಾರ್ಗರೆಟ್ :** ಮಾರ್ಗರೆಟ್ ನೋಬಲ್.



*ಕಲೆ: ಸುನಿಲ್ .ಜಿ.ಟಿ*

**ಶ್ರೀಮಾತೆ :** ಅಷ್ಟು ಕಷ್ಟದ ಹೆಸರು ನಾನು ಕರೆಯಲಾರೆ ಕಂದ. ನಾನು ನಿನ್ನನ್ನು ಖೂಕಿ (ಮಗು) ಅಂತಾ ಕರೀತೀನಿ. ನಿನ್ನ ಅಮ್ಮ ಎಲ್ಲಾ ಚೆನ್ನಾಗಿದ್ದಾರಾ?

**ಮಾರ್ಗರೆಟ್ :** ನಿಮಗೆ ನನ್ನ ಬಗ್ಗೆ ಹೇಗೆ ತಿಳಿಯಿತು... ಅಮ್ಮ?

**ಶ್ರೀಮಾತೆ :** ನರೇನ್ ನನಗೆ ಎಲ್ಲಾ ತಿಳಿಸಿದ್ದಾನೆ. ನಮ್ಮ ನರೇನ್ ದೇವರಿಗೆ ನಿವೇದಿಸಲು ವಿದೇಶದಿಂದ ಆಯ್ದು ತಂದಿರುವ ದೇವ ಪುಷ್ಪ ಮಗು ನೀನು. ಬಿಳಿಯ ತಾವರೆಯಂತೆ ಶೋಭಿಸುತ್ತಿರುವೆ. ಸ್ವಲ್ಪ ತಿಂಡಿ ತಿನ್ನು... ಮಗು ...

**ಮಾರ್ಗರೆಟ್ :** ... ನಾ ...... ನು.... ಇಲ್ಲಿ?!

**ಶ್ರೀಮಾತೆ :** ಓ..... ಹುಚ್ಚು ಹುಡುಗಿ..... ಬಾ ಇಲ್ಲಿ..... ಆ..... ಅನ್ನು..

**ಮಾರ್ಗರೆಟ್ :** (ಹಿಂಜರಿಯುವಳು)

**ಶ್ರೀಮಾತೆ :** ಬಾ..... ಇಲ್ಲಿ (ತಮ್ಮ ಕೈಯಾರೆ ತಿಂಡಿ ತಿನ್ನಿಸುವರು) ವಿದೇಶ..... ಪರದೇಶ ಅನ್ನೋದು ಎಲ್ಲಿದೆ ಮಗು? ಪರಮಹಂಸರು ಬಂದು ಅಂಥಾ ಭೇದಭಾವಗಳನ್ನೆಲ್ಲಾ ತೊಡೆದು ಹಾಕಿದ್ದಾರೆ. ಎಲ್ಲಾ ಮಾರ್ಗಗಳೂ ಸತ್ಯಕ್ಕೆ ದಾರಿಗಳು. ನನ್ನ ನರೇನ್ ಈ ಸಂದೇಶಾನ ಜಗತ್ತಿಗೆಲ್ಲಾ ಹರಡುತ್ತಾನೆ. ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಅಂತಿರೋದನ್ನ ನರೇನ್ ಠಾಕೂರರ ಹೆಸರಲ್ಲಿ ಒಂದು ಮಾಡುತ್ತಾನೆ.

**ಮಾರ್ಗರೆಟ್:** ಅಮ್ಮಾ....ಅಮ್ಮಾ...(ಕಂಬನಿಗರೆಯುತ್ತಾ... ಶ್ರೀಮಾತೆಯವರ ತೊಡೆಯ ಮೇಲೆ ಮಲಗುವಳು.)

**ಶ್ರೀಮಾತೆ :** (ಮಾರ್ಗರೆಟಳ ಕೂದಲು - ಹಣೆಯನ್ನು ನೇವರಿಸುತ್ತಾ ಇರುವರು)

### ದೃಶ್ಯ -೭

***ವಾಣಿ :*** *ಮುಂದೆ ಸ್ವಾಮೀಜಿಯವರು ದೇವಸ್ಥಾನಕ್ಕೆ ಹೋಗಿ ಹೇಗೆ ಪೂಜಿಸಬೇಕೆಂಬುದನ್ನು ಅವಳಿಗೆ ತಿಳಿಸಿದರು. ೧೮೯೮ರ ಮಾರ್ಚ್ ೨೫ ರಂದು ಶುಕ್ರವಾರ ಸ್ವಾಮೀಜಿಯವರು ಮಾರ್ಗರೆಟ್‌ಗೆ ಬ್ರಹ್ಮಚರ್ಯ ದೀಕ್ಷೆಯನ್ನಿತ್ತರು. ಹಿಂದಿನ ದಿನ ಉಪವಾಸ ಮೌನವ್ರತಗಳನ್ನು ಅವಳಿಂದ ಮಾಡಿಸಿದ್ದರು. ಅವಳಿಗೆ* ***ನಿವೇದಿತಾ*** *ಎಂದು ನಾಮಕರಣ ಮಾಡಿದರು.*

(ಬ್ರಹ್ಮಚರ್ಯ ದೀಕ್ಷೆ ಮತ್ತು ಮಂತ್ರ. ೪-೫ ಸಂನ್ಯಾಸಿಗಳು)



**ಸ್ವಾಮೀಜಿ :** (ಸರಳವಾದ ಪೂಜೆ – ಹೋಮ.) (ಭಸ್ಮವನ್ನು ಅವಳ ಹಣೆಗೆ ಇಟ್ಟು) ನೀನು ಬುದ್ಧನ ಮಾರ್ಗದಲ್ಲಿ ನಡೆ. ಇತರರಿಗಾಗಿ ಆತ ೫೦೦ ಜನ್ಮಗಳನ್ನು ಪ್ರಾಣಾರ್ಪಣೆ ಮಾಡಿದನು.

**ನಿವೇದಿತಾ :** ಇದು ನನ್ನ ಜೀವನದ ಅತ್ಯಂತ ಆನಂದದ ದಿನ. (ಎದ್ದು ಬುದ್ಧನ ವಿಗ್ರಹಕ್ಕೆ ಹೂವಿನಿಂದ ಅರ್ಚನೆ ಹಾಗೂ ನಮಸ್ಕಾರ)

## ದೃಶ್ಯ -೮

**(ಶಿವನ ರೂಪದಲ್ಲಿ ಸ್ವಾಮೀಜಿ. ನೃತ್ಯ ಮತ್ತು ಹಾಡು)**

*ವಾಣಿ : ನಂತರ ಸ್ವಾಮೀಜಿಯವರು ನಿವೇದಿತಾರೊಂದಿಗೆ ಉತ್ತರ ಭಾರತದ ಕಡೆ ಯಾತ್ರೆ ಪ್ರಾರಂಭಿಸಿದರು. ಮೊದಲು ಪಾಟ್ನಾಗೆ, ಬುದ್ಧನ ಬೋಧಗಯೆ, ಹಿಮಾಲಯದ ಕಾಶ್ಮೀರ, ಅಮರನಾಥ – ಹೀಗೆ ಹೋದ ಕಡೆಯಲ್ಲೆಲ್ಲಾ ಸ್ವಾಮೀಜಿಯವರು ನಿವೇದಿತಾಳಿಗೆ ಹಿಂದೂ ಸಂಸ್ಕೃತಿಯ ಬಗ್ಗೆ, ಆದರ್ಶದ ಬಗ್ಗೆ ವಿವರಿಸುತ್ತಿದ್ದರು. ಆತ್ಮನ ಮೋಕ್ಷ ಮತ್ತು ಜಗತ್ತಿನ ಹಿತ ಎಂಬ ಭಾವವನ್ನು ಚೆನ್ನಾಗಿ ವಿವರಿಸಿದರು. ಒಬ್ಬನು ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಧ್ಯಾನ ಜಪಗಳನ್ನು ಮಾಡಬೇಕು. ಅನಂತರ ಎಲ್ಲರ ಒಳ್ಳೆಯದಕ್ಕೂ ತನ್ನ ಬಾಳನ್ನು ಅರ್ಪಿಸಬೇಕು ಎಂಬ ಸಿದ್ಧಾಂತವನ್ನು ನಿವೇದಿತಾ ಅರ್ಥಮಾಡಿಕೊಂಡಳು. ಒಂದು ದಿನ ಸ್ವಾಮೀಜಿಯವರು ನಿವೇದಿತಾಳಿಗೆ ಕೋಲ್ಕತ್ತದಲ್ಲಿ ಶಾಲೆಯನ್ನು ತೆರೆಯಲು ಆಶೀರ್ವದಿಸಿದರು. ಆ ವಿಷಯದಲ್ಲಿ ಆಕೆಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟರು. ೧೮೯೮ರ ನವೆಂಬರ್ ೧೩ ರಂದು ನಿವೇದಿತಾ ಶಾಲೆ ಪ್ರಾರಂಭ. ಅಂದು ಕಾಳೀಪೂಜೆಯ ದಿನವಾಗಿತ್ತು.*

## ದೃಶ್ಯ-೯

**(ಕೋಲ್ಕತ್ತದಲ್ಲಿ ಶಾಲೆ ಆರಂಭ – ಶ್ರೀಮಾತೆ ಹಾಗೂ ಸ್ವಾಮೀಜಿಯವರ ಭೇಟಿ; ಶಾಲೆಯ ಚಟುವಟಿಕೆ)**



**ಶ್ರೀಮಾತೆ:** ಕಾಳೀಮಾತೆಯ ಸಂಪೂರ್ಣ ಅನುಗ್ರಹ ನಿನ್ನ ಮೇಲಿದೆ. ಮಕ್ಕಳು ಆದರ್ಶ ಪ್ರಾಯರಾಗಿರುತ್ತಾರೆ. (ಹರಸುವರು)

**ಸ್ವಾಮೀಜಿ :** ಶ್ರೀ ಜಗನ್ಮಾತೆ ನಿನಗೆ ಎಲ್ಲವನ್ನೂ ಕರುಣಿಸಲಿ. ಜಗನ್ಮಾತೆ ನಿನ್ನ ಮನಸ್ಸು, ಬುದ್ಧಿಗಳಲ್ಲಿ ಸ್ಫೂರ್ತಿ ಮತ್ತು ಬೆಳಕನ್ನು ನೀಡಲಿ. ನಿನಗೆ ಹೆಚ್ಚಿನ ಸ್ವಾತಂತ್ರ್ಯ, ಶಕ್ತಿಯನ್ನು ನೀಡುವಂತೆ ಜಗನ್ಮಾತೆಯನ್ನು ಪ್ರಾರ್ಥಿಸುವೆನು. ಅದರೊಂದಿಗೆ ಅಪಾರ ಶಾಂತಿಯೂ ನಿನ್ನದಾಗಲಿ. ಇದೊಂದು ಆದರ್ಶ ಶಾಲೆಯಾಗಲಿ (ಆಶೀರ್ವಾದ – ಹೋಗುವರು)

**(ತರಗತಿಯಲ್ಲಿ)**

**ನಿವೇದಿತಾ:** ಮಕ್ಕಳೇ, ನಿಮ್ಮೆಲ್ಲರ ಭಾರತದ ರಾಣಿ ಯಾರು?

**ಬಾಲಕಿ – ೧:** ವಿಕ್ಟೋರಿಯಾ ರಾಣಿ.

**ನಿವೇದಿತಾ:** (ನಿರಾಶೆಯಿಂದ) ಓ ಮಗುವೇ, ಅದು ಹೇಗೆ ವಿಕ್ಟೋರಿಯಾ ರಾಣಿ ಭಾರತದ ರಾಣಿಯಾಗುವಳು? ನಿಮ್ಮ ದೇಶದ ಸಂಸ್ಕೃತಿಯ ಬಗ್ಗೆ ನೀವೇ ಎಷ್ಟು ಅಜ್ಞಾನದಿಂದ ಇದ್ದೀರಿ!

**ಬಾಲಕಿ – ೨:** ಮತ್ತೆ ನಮ್ಮ ದೇಶದ ಆದರ್ಶ ರಾಣಿ ಯಾರು?

**ನಿವೇದಿತಾ:** ಭಾರತದ ನಿಜವಾದ ಆದರ್ಶ ನಾರಿಯರೆಂದರೆ ಸೀತಾ, ಸಾವಿತ್ರಿ, ದಮಯಂತಿಯರು. ವಿಕ್ಟೋರಿಯಾ ನಿಮಗೆಂದಿಗೂ ರಾಣಿಯಲ್ಲ. ಇಂದಿನಿಂದ ನಾವು ನಮ್ಮ ಭಾರತದೇಶದ ಇತಿಹಾಸವನ್ನು ಚೆನ್ನಾಗಿ ತಿಳಿಯೋಣ.

**(ಶಾಲೆಯಲ್ಲಿ – ಆಟ- ಪಾಠ- ಚಿತ್ರಕಲೆ; ಹುಣಿಸೆ ಬೀಜದಿಂದ ಗಣಿತ)**

*ವಾಣಿ: ನಿವೇದಿತಾ ತಾನೇ ಶಾಲೆಯಲ್ಲಿ ಮಕ್ಕಳಿಗೆ ಒತ್ತಾಯದಿಂದ ಏನನ್ನೂ ಕಲಿಸದೆ, ಆಟಗಳ ನಡುವೆ ಅವರವರ ಮನೋವೃತ್ತಿಗಳಿಗೆ ಅನುಗುಣವಾಗಿ ಕಲಿಸುತ್ತಿದ್ದಳು. ಚಿಕ್ಕವರಿಗೆ ಅಕ್ಷರಾಭ್ಯಾಸ, ದೊಡ್ಡವರಿಗೆ ರಾಷ್ಟ್ರೀಯತೆ, ಪ್ರೀತಿ ಮತ್ತು ಸೇವೆಯನ್ನು ಕಲಿಸುತ್ತಿದ್ದಳು. ಜನ ಅವಳನ್ನು ಪ್ರೀತಿಸುತ್ತಿದ್ದರು. ಅವಳ ಹಂಬಲವನ್ನು ಅರಿತ ಸ್ವಾಮೀಜಿ, ಅವಳನ್ನು ರಾಮಕೃಷ್ಣ ಸಂಘದ ಸದಸ್ಯೆಯನ್ನಾಗಿಸಿದರು.*

*ಮುಂದಿನ ವರ್ಷ ಮೇನಲ್ಲಿ ಪ್ಲೇಗ್ ಜಾಡ್ಯ ಕೊಲ್ಕತ್ತೆಗೆ ಹರಡಿತು.ಕೊಲ್ಕತ್ತೆಯಲ್ಲಿ ಪ್ಲೇಗ್ ಬಂದಾಗ ನಿವೇದಿತಾ ಪೊರಕೆ ಹಿಡಿದು ಕಸ ಬಳಿದಳು. ಪ್ರವಾಹದಿಂದ ಜನ ಬಳಲಿದಾಗ ನೆರವು ನೀಡಿದಳು. ರೋಗಿ ಮಕ್ಕಳನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ಸೇವೆ ಮಾಡಿದಳು. ತಾನು ಉಪವಾಸವಿದ್ದೂ ಹಸಿದವರಿಗೆ ಊಟ ನೀಡಿದಳು. ಆಗ ನಿವೇದಿತಾ ಭಾರತಕ್ಕೆ ಸಲ್ಲಿಸಿದ ಸೇವೆಯು ಅನುಪಮವಾದದ್ದು; ಅವಳ ಭಾರತಪ್ರೇಮ ಅನನ್ಯವಾದುದು. ಭರತಖಂಡದ ಸೇವೆಯೇ ತಾನು ಸ್ವಾಮೀಜಿಗೆ ಮಾಡುವ ಕರ್ತವ್ಯವೆಂದು ಆಕೆ ಭಾವಿಸಿದಳು.* *(ಮುಂದಿನ ಸಂಚಿಕೆಗೆ)*